## ಹನುಮನ ಹಾಸಿಗೆ!

ಇತ್ತೀಚೆಗೆ ಕುಟುಂಬ ಸಮೇತ ಮಂತ್ರಾಲಯದ ಸಮೀಪದ ಪುಣ್ಯಕ್ಷೇತ್ರ ಪಂಚವಟಿಗೆ ತೆರಳಿದ್ದೆವು. ಅಲ್ಲಿ ಪಂಚಮುಖಿ ಆಂಜನೇಯನ ದರ್ಶನ ಮುಗಿಸಿಕೊಂಡು ಹಾಗೆಯೇ ಮುಂದೆ ತೆರಳುವಾಗ ದೇವಸ್ಥಾನದ ಪಕ್ಕದಲ್ಲಿಯೇ ಇದ್ದ ಬೃಹದಾಕಾರದ ಉದ್ದನೆಯ ಬಂಡೆಗಳು ಗೋಚರಿಸಿದವು. ಪಂಚಮುಖಿ ದೇವಸ್ಥಾನದ ಹಿಂದುಗಡೆ ಇರುವ ಈ ಬಂಡೆಗಳನ್ನು ಸ್ಥಳೀಯರು ಪಂಚಮುಖಿ ಆಂಜನೇಯನ ಹಾಸಿಗೆ ಮತ್ತು ದಿಂಬುಗಳೆಂದು ನಂಬಿ ಪೂಜಿಸುತ್ತಿದ್ದಾರೆ. ನೀವು ಪಂಚಮುಖಿ ದೇವಸ್ಥಾನಕ್ಕೆ ಹೋದಾಗ ಮರೆಯದೇ ಈ ಹಾಸಿಗೆ ದಿಂಬುಗಳನ್ನು ನೋಡಿಕೊಂಡು ಬನ್ನಿ!

ಚಿತ್ರ- ಬರಹ:
**ಪ್ರಕಾಶ ಎಸ್.ಮನ್ನಂಗಿ,ಹಾವೇರಿ**






## ಒಕಳಿ ಹೊಂಡ

ಚಿತ್ರದುರ್ಗದ ಈ ಓಕಳಿ ಹೊಂಡ ಮೇಲುದುರ್ಗದ ಉಯ್ಯಾಲೆಕಂಬದ ಸನಿಹದಲ್ಲಿದೆ. ನೀಟಾಗಿ ಕಲ್ಲು ಚಪ್ಪಡಿಗಳನ್ನು ಜೋಡಿಸಿ ನಯಗಾರೆಯಿಂದ ಮೆತ್ತಿಗೆ ಹಾಕಲಾಗಿದೆ. ಸುಮಾರು 10 ಅಡಿ ಆಳದ ನಕ್ಷತ್ರಾಕಾರದ 12 ಮೂಲೆ ಹೊಂದಿರುವ ಚಿಕ್ಕ ಹೊಂಡಕ್ಕೆ ಸರಾಗವಾಗಿ ಇಳಿದು ಓಕಳಿ ತುಂಬಿಕೊಳ್ಳಲು ನಾಲ್ಕು ಕಡೆಯಿಂದ ಚಿಕ್ಕ ಚಿಕ್ಕ ಪಾವಟಿಗೆಗಳನ್ನು ಮಾಡಲಾಗಿದೆ. ಹಿಂದೆ ವಸಂತೋತ್ಸವ (ಕಾಮನಹಬ್ಬ)ದ ಆಚರಣೆ ಸಂದರ್ಭದಲ್ಲಿ ಪಾಳೆಗಾರರ ಕುಟುಂಬದವರು ಮತ್ತು ಸೈನಿಕರು ಸೇರಿ ಮನೆ ದೇವತೆಯಾದ ಶ್ರೀ ಏಕನಾಥೇಶ್ವರಿ ಅಮ್ಮನವರಿಗೆ ಓಕಳಿ ಸ್ನಾನ ಮಾಡಿಸಿ ಮಂಗಳಾರತಿ ಆದ ನಂತರ ಎಲ್ಲರೂ ಸೇರಿ ಬಣ್ಣವನ್ನು ಎರಚಾಡುತ್ತಿದ್ದರು ಎಂಬ ಮಾತಿದೆ. ಇಂತಹ ದೊಡ್ಡೋಕಳಿ ಹೊಂಡ ಕರ್ನಾಟಕದಲ್ಲಿ ಎಲ್ಲೂ ಕಂಡು ಬರುವುದಿಲ್ಲ. 300 ವರ್ಷಗಳು ಗತಿಸಿದರೂ ಹಾಳಾಗದೇ ಹಾಗೆಯೆ ಇದೆ.

**-ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**

## ಬುಶ್ ಷರ್ಟ್!

ಹಳೆಯ ಕಾಲದಲ್ಲಿ ಹಿರಿಯರು ಉಪಯೋಗಿಸುವ ಈ ನಿಲುವಂಗಿ ನೋಡಿ. ಎದೆಯ ಮೇಲೆ ಮೂರು ಬಟನ್. ಮುಚ್ಚಳವಿರುವ ಕಿಸೆ ಪಾಕೇಟು ಇಟ್ಟುಕೊಳ್ಳಲು. ಆಚೆ ಈಚೆ ಬದಿಯಲ್ಲಿ ಕವಳದ ಚಂಚಿ (ಚೀಲ) ಇಟ್ಟುಕೊಳ್ಳಲು ಎರಡು ಕಿಸೆ. ಮೊಣಕಾಲಿನವರೆಗೆ ಇರುವ ಈ ಬುಶ್ ಷರ್ಟ್‌ಗೆ ತಗಲುವ ಬಟ್ಟೆಯಿಂದ ಈಗಿನವರು ಎರಡು ಶರ್ಟ್ ಹೊಲಿಸಿಕೊಳ್ಳಬಹುದು.

**-ಕೆಕ್ಕಾರ ಎಸ್. ಎ. ಭಟ್ಟ, ಕುಮಟ**

